ಸತ್ಯಮೇವ ಜಯತೇ
ರಾಜೀವ್ ಚಂದ್ರಶೇಖರ್
ಸಂಸತ್ ಸದಸ್ಯರು

ಅಕ್ಟೋಬರ್ 30, 2014

ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರೇ,

ಬೆಂಗಳೂರಿನ ನಾಗರಿಕರು ತಮ್ಮನ್ನು ಆಳುತ್ತಿರುವ ಸರ್ಕಾರದ ಅಸಾಮರ್ಥ್ಯದ ವಿರುದ್ಧ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸುತ್ತಿದ್ದಾರೆ. ಪ್ರಸ್ತುತ, 150 ವರ್ಷಗಳಷ್ಟು ಹಳೆಯದಾದ ಬಾಲಬ್ರೂಯಿ ಸರ್ಕಾರಿ ಅತಿಥಿಗೃಹವನ್ನು ಕೆಡುಹಿ ಆ ಜಾಗದಲ್ಲಿ ಶಾಸಕರಿಗೆ ಕ್ಲಬ್ ನಿರ್ಮಿಸುವ ಸರ್ಕಾರದ ಪ್ರಸ್ತಾವ ಮತ್ತು ನಂತರದಲ್ಲಿ ಬಾಲಬ್ರೂಯಿ ಅತಿಥಿಗೃಹವನ್ನು ಕೆಡಹುವ ಅಥವಾ ಮಾರ್ಪಡಿಸುವ ಯಾವ ಪ್ರಸ್ತಾಪವು ಇಲ್ಲವೆಂಬ ತಮ್ಮ ಸ್ಪಷ್ಟೀಕರಣದ ಹಿನ್ನಲೆಯಲ್ಲಿ ಈ ಪತ್ರವನ್ನು ಬರೆಯುತ್ತಿದ್ದೇನೆ. ಪ್ರಮುಖ ಪಾರಂಪರಿಕ ಕಟ್ಟಡವನ್ನು ಯಥಾಸ್ಥಿತಿ ಉಳಿಸಿಕೊಂಡು ಸಂರಕ್ಷಿಸುವಲ್ಲಿ ಯಶಸ್ವಿಯಾದ ತಮ್ಮ ಮಧ್ಯಪ್ರವೇಶಿಕೆಯನ್ನು ನಾನು ಸ್ವಾಗತಿಸುತ್ತೇನೆ.

ಹಾಗಿದ್ದರೂ, ಹಲವಾರು ವರ್ಷಗಳಿಂದ ಬೆಂಗಳೂರಿನ ಸಾಂಸ್ಕೃತಿಕ ಮತ್ತು ಐತಿಹಾಸಿಕ ಪರಂಪರೆಗಳು ಅಪಾಯದಲ್ಲಿದ್ದು ಅವುಗಳ ಮೇಲೆ ನಿರಂತರವಾಗಿ ಆಕ್ರಮಣ ನಡೆಯುತ್ತಿದೆ. ಇಂತಹ ಪಾರಂಪರಿಕ ಕಟ್ಟಡಗಳನ್ನು ಕೆಡಹುವುದರಿಂದ ಬೆಂಗಳೂರಿನ ಹೆಗ್ಗುರುತುಗಳನ್ನೇ ನಾಶಪಡಿಸಿದಂತಾಗುವುದಲ್ಲದೆ, ಅಂತರ್ಗತವಾಗಿರುವ ನಗರದ ಸ್ವರೂಪವನ್ನು ಉಪೇಕ್ಷಿಸಿದಂತಾಗುತ್ತದೆ. ಇದು ಇತ್ತೀಚಿನ ದಿನಗಳ ಸರ್ಕಾರದ ಕಾರ್ಯವೈಖರಿಯ ಪರಿಣಾಮವೆಂದು ಹೇಳಲೇಬೇಕಾಗಿದೆ. ಹಾಗಾಗಿ, ನಮ್ಮ ನಗರದ ಸಂಸ್ಕೃತಿ ಮತ್ತು ಪರಂಪರೆಗಳನ್ನು ಸಂರಕ್ಷಿಸಲು ಶಾಶ್ವತ ಸಾಂಸ್ಥಿಕ ಪರಿಹಾರವನ್ನು ನಿರೂಪಿಸುವ ತುರ್ತು ಅಗತ್ಯವಿದೆ.

ತಮಗೆ ತಿಳಿದಿರುವಂತೆ, ಸುಮಾರು 477 ವರ್ಷಗಳ ವೈಭವದ ಇತಿಹಾಸವುಳ್ಳ ನಮ್ಮ ಬೆಂಗಳೂರು ನಗರ ನೂರಾರು ಪಾರಂಪರಿಕ ಕಟ್ಟಡಗಳ ನೆಲೆಯಾಗಿದ್ದು, ಭವ್ಯ ನಿರ್ಮಾಣಗಳ ಐತಿಹಾಸಿಕ ಕೇಂದ್ರವೂ ಆಗಿದೆ. ಬೆಂಗಳೂರು ಸ್ಥಾಪಕ ಕೆಂಪೇಗೌಡರಿಂದ ಮೊದಲ್ಗೊಂಡು ಮರಾಠರು, ಬ್ರಿಟಿಷರು ಮತ್ತು ನಂತರ ಜನಪರ ಆಡಳಿತ ನೀಡಿದ ಒಡೆಯರ್ ರಾಜರುಗಳ ಕಾಲದ ನೂರಾರು ಗುಡಿ, ಗೋಪುರ, ಕಟ್ಟಡಗಳು ಇಲ್ಲಿನ ಇತಿಹಾಸಕ್ಕೆ ಸಾಕ್ಷಿಯಾಗಿವೆ. ಆದರೆ, ಮಿತಿಮೀರಿದ ನಗರದ ಅನಿಯಂತ್ರಿತ ಬೆಳವಣಿಗೆಗಳು ಮತ್ತು ಆಡಳಿತಾತ್ಮಕ ಬೇಜವಾಬ್ದಾರಿತನಗಳ ಕಾರಣದಿಂದ ನಾವು ಅನೇಕ ಅಪೂರ್ವ ಐತಿಹಾಸಿಕ ಕಟ್ಟಡಗಳನ್ನು ಈಗಾಗಲೇ ಕಳೆದುಕೊಂಡಿದ್ದೇವೆ. ಪರಂಪರೆಗಳು ನಿರ್ಮಾಣವಾಗಲು ನೂರಾರು ವರ್ಷಗಳು ಬೇಕಾಗುತ್ತದೆ, ಆದರೆ ಅವುಗಳನ್ನು ತೊಡೆದುಹಾಕಲು ಕೆಲ ದಿನಗಳ ನಿರ್ಲಕ್ಷ್ಯವೇ ಸಾಕು.

ಪ್ರಮುಖವಾಗಿ ಭಾರಿ ವಾಣಿಜ್ಯೀಕರಣದ ಪ್ರಭಾವದಿಂದ, ಖಾಸಗಿ ಮತ್ತು ಸರ್ಕಾರಿ ಸ್ವಾಮ್ಯದ 2000ಕ್ಕೂ ಅಧಿಕ ಪಾರಂಪರಿಕ ಕಟ್ಟಡಗಳನ್ನು ಹೊಂದಿದ್ದ ನಮ್ಮ ನಗರದಲ್ಲಿ ಈಗ ಸುಮಾರು 400 ಉಳಿದುಕೊಂಡಿವೆ. ಇತ್ತೀಚಿನ ಹತ್ತು ವರ್ಷಗಳಲ್ಲಿ ಬಹಳಷ್ಟು ಪಾರಂಪರಿಕ ಕಟ್ಟಡಗಳು ಕಣ್ಮರೆಯಾಗಿವೆ. ಇದು ಗಂಭೀರವಾದ ವಿಷಯವಾಗಿದ್ದು, ನಮ್ಮ



11ನೇ ಮಹಡಿ, ದೊಡ್ಡ ಗೋಪುರ, ಸರ್.ಎಂ.ವಿಶ್ವೇಶ್ವರಯ್ಯ ಕೇಂದ್ರ, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು - 560 001.
ದೂರವಾಣಿ : 91-80-22863600, ದೂರವಾಣಿ / ಫ್ಯಾಕ್ಸ್: 91-80-22863680

सत्यमेव जयते

ನಗರದ ಇತಿಹಾಸ ಪರಂಪರೆಗಳನ್ನು ಸಂರಕ್ಷಿಸಲು ಸೂಕ್ತ ಕಾನೂನು ಅಥವಾ ಒಂದು ಸಾಂಸ್ಥಿಕ ವ್ಯವಸ್ಥೆಯನ್ನು ತುರ್ತಾಗಿ ನಿರೂಪಿಸಲೇಬೇಕಾಗಿದೆ.

ಅನಿಯಂತ್ರಿತ ಬೆಳವಣಿಗೆಗಳಿಂದ ಬೆಂಗಳೂರು ನಗರದ ಮೂಲಸ್ವರೂಪಕ್ಕೆಯೇ ಧಕ್ಕೆಯಾಗಿದೆ. ನಿವೇಶನ, ಪ್ರದೇಶಗಳು, ಕಟ್ಟಡಗಳು ಮತ್ತು ಇನ್ನಿತರ ಐತಿಹಾಸಿಕ ಪಾರಂಪರಿಕ ನಿರ್ಮಿತಿಗಳನ್ನು ಸೂಕ್ತವಾಗಿ ಗುರುತಿಸಲಾಗಿಲ್ಲ. ಆದ್ದರಿಂದ ಅವು ಸುಲಭಭೇಧ್ಯವಾಗಿವೆ. ನಗರದ ಶ್ರೀಮಂತ ಪರಂಪರೆ ಮತ್ತು ಇತಿಹಾಸವನ್ನು ಸಂರಕ್ಷಿಸುವ, ಪೋಷಿಸುವ, ಹೊಣೆಹೊತ್ತಿರುವ ಅಥವಾ ಉತ್ತರದಾಯಿಯಾಗಿರುವ ಒಂದು ಸಂಸ್ಥೆಯೇ ನಮ್ಮಲ್ಲಿಲ್ಲ. ಇದೆಲ್ಲದರ ನಡುವೆಯೂ ಕೂಡ ಹಲವಾರು ಸರ್ಕಾರೇತರ ಸಂಘಟನೆಗಳು, ಇತಿಹಾಸಜ್ಞರು, ವಾಸ್ತುಶಿಲ್ಪಿಗಳು ಮತ್ತು ಸಕ್ರಿಯ ನಾಗರಿಕರು ಬೆಂಗಳೂರು ನಗರದ ಪರಂಪರೆಗಳ ಉಳಿವಿಗೆ ತಮ್ಮ ತಮ್ಮ ನೆಲೆಯಲ್ಲಿ ಶ್ರಮಿಸುತ್ತಿದ್ದಾರೆ. ಈಗ ತುರ್ತಾಗಿ ಆಗಬೇಕಿರುವುದೆಂದರೆ ಇಂತಹ ಎಲ್ಲ ಪ್ರಯತ್ನಗಳ ಮತ್ತು ಕಾರ್ಯಸೂಚಿಗಳ ಸಮೀಕರಣದೊಂದಿಗೆ ಸಮರ್ಪಕವಾದ ಶಾಸನಾತ್ಮಕ ಕ್ರಮಗಳ ರಚನೆ ಮತ್ತು ಅನುಷ್ಠಾನ.

ಬೆಂಗಳೂರಿನಲ್ಲಿರುವ ನೂರಾರು ಐತಿಹಾಸಿಕ ತಾಣಗಳು ಮತ್ತು ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸಲು ಈ ಕೆಳಗಿನ ಸಲಹೆಗಳನ್ನು ಪರಿಗಣಿಸಬೇಕೆಂದು ಕೋರುತ್ತೇನೆ;

1. ನಗರದ ಐತಿಹಾಸಿಕ ತಾಣಗಳು/ಕಟ್ಟಡಗಳು, ಪಾರಂಪರಿಕ ನಿರ್ಮಿತಿಗಳು, ಸಾಂಸ್ಕೃತಿಕ ಕುರುಹುಗಳ ಗುರುತಿಸುವಿಕೆ, ಸಂರಕ್ಷಣೆ ಮತ್ತು ಸುರಕ್ಷತೆಗಳ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸುವ ಬೆಂಗಳೂರು ಪಾರಂಪರಿಕೆ ಆಯೋಗವನ್ನು (ಬೆಂಗಳೂರು ಹೆರಿಟೇಜ್ ಕಮಿಶನ್) ಸ್ಥಾಪಿಸಬೇಕು.

2. ಇತಿಹಾಸವನ್ನು ರಕ್ಷಿಸಿ ಭವಿಷ್ಯವನ್ನು ಶ್ರೀಮಂತಗೊಳಿಸುವುದೇ ಈ ಆಯೋಗದ ಧ್ಯೇಯವಾಗಿರಬೇಕು

3. ನಗರದ ಪರಂಪರೆಗಳನ್ನು ದಾಖಲಿಸಿ ಬಿತ್ತರಿಸುವ ಶಾಶ್ವತ ಕೇಂದ್ರವಾಗಿ ಬೆಂಗಳೂರು ಮ್ಯೂಸಿಯಮ್ ನ್ನು ಸ್ಥಾಪಿಸಬೇಕು

4. ಬೆಂಗಳೂರು ಮಹಾನಗರದ ವ್ಯಾಪ್ತಿಯ ಪರಂಪರೆಯನ್ನು ಗುರುತಿಸಿ, ಸಂರಕ್ಷಿಸಿ ಮತ್ತು ಸುರಕ್ಷಿತವಾಗಿಸಲು ಆಯಕಟ್ಟಿನ ಶಾಸನಬದ್ಧ ಸಂಸ್ಥೆಯನ್ನು ಸ್ಥಾಪಿಸಬೇಕು. ಆರ್ಥಿಕ ಸಂಪನ್ಮೂಲ ಒದಗಿಸುವ ಜೊತೆಗೆ ಇದನ್ನು ಒಂದು ಸ್ವಾಯತ್ತಸಂಸ್ಥೆಯನ್ನಾಗಿ ರಚಿಸಿ, ಪಾರಂಪರಿಕ ನಿಯಮಗಳನ್ನು ನಿರೂಪಿಸುವ ಮತ್ತು ಸರ್ಕಾರಿ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ನಿಯಮಗಳ ಅನುಷ್ಠಾನವನ್ನು ಖಾತರಿಪಡಿಸಿಕೊಳ್ಳುವ ಹೊಣೆಗಾರಿಕೆಯನ್ನು ಇದಕ್ಕೆ ನೀಡಬೇಕು.

5. ಬೆಂಗಳೂರು ನಗರದಲ್ಲಿ ನಿರ್ದಿಷ್ಟ ಪ್ರದೇಶಗಳನ್ನು ಪಾರಂಪರಿಕ ವಲಯವನ್ನಾಗಿ ತಕ್ಷಣವೇ ಘೋಷಿಸಬೇಕು.

सत्यमेव जयते

6. ಬೆಂಗಳೂರಿನ ನಗರದೊಂದಿಗೆ ಬೆರೆತುಕೊಂಡಿರುವ ಅನೇಕ ಪಾರಂಪರಿಕ ಕಟ್ಟಡಗಳು ಖಾಸಗಿಯವರ ಒಡೆತನದಲ್ಲಿರುವುದರಿಂದ ಅವುಗಳ ಸೂಕ್ತ ನಿರ್ವಹಣೆ ಮತ್ತು ಸಂರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ತೆರಿಗೆ ಕಡಿತ ಮುಂತಾದ ಅಗತ್ಯ ಪ್ರೋತ್ಸಾಹಕ ಕ್ರಮಗಳನ್ನು ಜಾರಿಗೆ ತರಬೇಕು.

ರಾಜಕೀಯ ನಾಯಕರಾಗಿ ಮತ್ತು ಸಮಾಜದ ಜವಾಬ್ದಾರಿಯುತ ನಾಗರಿಕರಾಗಿ ಕೂಡ ನಮ್ಮ ಹೆಮ್ಮೆಯ ಸಂಸ್ಕೃತಿ ಮತ್ತು ಪರಂಪರೆಗಳನ್ನು ನಮ್ಮ ಮಕ್ಕಳಿಗೆ ಮತ್ತು ಭವಿಷ್ಯದ ಪೀಳಿಗೆಗೆ ಸುರಕ್ಷಿತವಾಗಿ ಉಳಿಸುವ ಹೊಣೆಗಾರಿಕೆ ನಮ್ಮ ಮೇಲಿರುವುದರಿಂದ ಇದನ್ನು ಈಡೇರಿಸುವ ನಿಟ್ಟಿನಲ್ಲಿ ಸಾಧ್ಯವಿರುವ ಎಲ್ಲ ಕ್ರಮಗಳನ್ನೂ ನಾವು ತೆಗೆದುಕೊಳ್ಳಬೇಕು. ನಮ್ಮ ಪಾರಂಪರಿಕ ಶ್ರೀಮಂತಿಕೆಯನ್ನು ಸಂರಕ್ಷಿಸುವ ಆದ್ಯತೆಯೊಂದಿಗೆ, ವಾಸ್ತವ ನೆಲೆಯಲ್ಲಿ ಈ ಬದಲಾವಣೆಗಳು ಸಾಕಾರಗೊಳ್ಳಲು ಮೊದಲು ರಾಜಕೀಯವಾಗಿ ಇದು ಎಲ್ಲರಿಗೂ ಅಂಗೀಕಾರವಾಗುವಂತೆ ಸಮನ್ವಯ ಸಾಧಿಸಬೇಕಾಗಿದೆ.

ಈ ವಿಷಯದಲ್ಲಿ ತಮ್ಮ ಶೀಘ್ರ ಪ್ರತಿಕ್ರಿಯೆಗಳನ್ನು ಎದುರುನೋಡುತ್ತಿದ್ದೇನೆ.

ತಮ್ಮ ವಿಶ್ವಾಸಿ,

**ರಾಜೀವ್ ಚಂದ್ರಶೇಖರ್**

**ಶ್ರೀ ಸಿದ್ದರಾಮಯ್ಯನವರು**
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ವಿಧಾನಸೌಧ, ಬೆಂಗಳೂರು